# ಕರ್ನಾಟಕ ಸರ್ಕಾರದ ನಡವಳಿ

**ವಿಷಯ**:- 2006ರ ಯುಜಿಸಿ/ಐಸಿಎಆರ್‌ಮತ್ತು ಎಫ್‌ಎನ್‌ಜೆಪಿಸಿ ವೇತನ ಶ್ರೇಣಿಗಳಲ್ಲಿ ವೇತನ ಪಡೆದು ನಿವೃತ್ತರಾದ ಬೋಧಕ ಮತ್ತು ತತ್ಸಮಾನ ವರ್ಗದವರಿಗೆ ಹಾಗೂ ನಿವೃತ್ತ ನ್ಯಾಯಾಂಗ ಅಧಿಕಾರಿಗಳಿಗೆ ತುಟ್ಟಿಭತ್ಯೆಯನ್ನು ಮಂಜೂರು ಮಾಡುವ ಬಗ್ಗೆ.

**ಓದಲಾಗಿದೆ**:- (1) ಸರ್ಕಾರಿ ಆದೇಶ ಸಂಖ್ಯೆ: ಇಡಿ 37 ಯುಎನ್‌ಇ 2009 ದಿನಾಂಕ: 24.12.2009.

(2) ಸರ್ಕಾರಿ ಆದೇಶ ಸಂಖ್ಯೆ: ಎಹೆಚ್‌ಡಿ 64 ಎಯುಎ 2009 ದಿನಾಂಕ: 24.03.2010.

(3) ಸರ್ಕಾರಿ ಆದೇಶ ಸಂಖ್ಯೆ:ಲಾ 147 ಎಲ್‌ಎಸಿ 2009 ದಿನಾಂಕ:24.06.2010

(4) ಸರ್ಕಾರಿ ಆದೇಶ ಸಂಖ್ಯೆ:ಆಇ (ವಿ) 6 ಸಿಪಿಪಿ 2010 ದಿನಾಂಕ:17.08.2010

(5) ಸರ್ಕಾರಿ ಆದೇಶ ಸಂಖ್ಯೆ:ಆಇ (ವಿ) 149 ಪಿಇಎನ್ 2010 ದಿನಾಂಕ:19.08.2010

(6) ಸರ್ಕಾರಿ ಆದೇಶ ಸಂಖ್ಯೆ:ಆಇ 27 ಎಸ್‌ಆರ್‌ಪಿ 2010 ದಿನಾಂಕ:17.10.2010.

(7) ಸರ್ಕಾರಿ ಆದೇಶ ಸಂಖ್ಯೆ:ಆಇ (ವಿ) 21 ಪಿಇಎನ್ 2010 ದಿನಾಂಕ:25.11.2010.

(8) ಸರ್ಕಾರಿ ಆದೇಶ ಸಂಖ್ಯೆ:ಆಇ (ವಿ) 21 ಸಿಪಿಪಿ 2010 ದಿನಾಂಕ: 9.12.2010.

(9) ಸರ್ಕಾರಿ ಆದೇಶ ಸಂಖ್ಯೆ:ಆಇ 22 ಎಸ್‌ಆರ್‌ಪಿ 2011 ದಿನಾಂಕ:19.04.2011.

---

## ಸರ್ಕಾರಿ ಆದೇಶ ಸಂಖ್ಯೆ: ಆಇ (ವಿಶೇಷ) 120 ಪಿಇಎನ್ 2011
## ಬೆಂಗಳೂರು, ದಿನಾಂಕ: 19ನೇ ಮೇ 2011.

ದಿನಾಂಕ 1ನೇ ಜನವರಿ 2011 ರಿಂದ ಜಾರಿಗೆ ಬರುವಂತೆ 2006ರ ಯುಜಿಸಿ/ಐಸಿಎಆರ್/ಎಫ್‌ಎನ್‌ಜೆಪಿಸಿ ವೇತನ ಶ್ರೇಣಿಗಳಲ್ಲಿ ವೇತನ ಪಡೆದು ದಿನಾಂಕ: 1.1.2006 ರಂದು ಅಥವಾ ತದ ನಂತರ ನಿವೃತ್ತರಾದ ಬೋಧಕ ಮತ್ತು ತತ್ಸಮಾನ ವರ್ಗದ ಪಿಂಚಣಿದಾರರಿಗೆ ಹಾಗೂ ನಿವೃತ್ತ ನ್ಯಾಯಾಂಗ ಅಧಿಕಾರಿಗಳಿಗೆ ಹಾಲಿ ಲಭ್ಯವಿರುವ ತುಟ್ಟಿಭತ್ಯೆಯ ದರವನ್ನು ಮೂಲ ನಿವೃತ್ತಿ ವೇತನ/ಕುಟುಂಬ ನಿವೃತ್ತಿ ವೇತನದ ಶೇಕಡ 45 ರಿಂದ 51ಕ್ಕೆ ಹೆಚ್ಚಿಸಿ ಮಂಜೂರು ಮಾಡಲು ಸರ್ಕಾರವು ಹರ್ಷಿಸುತ್ತದೆ.

ಈ ಆದೇಶದಿಂದಾಗಿ ಪಾವತಿಸಬೇಕಾದ ತುಟ್ಟಿಭತ್ಯೆಯ ಮೊತ್ತವನ್ನು ಮುಂದಿನ ಆದೇಶದವರೆಗೆ ನಗದಾಗಿ ಪಾವತಿಸತಕ್ಕದ್ದು.

ತುಟ್ಟಿಭತ್ಯೆ ಕಾರಣದಿಂದ ಸಂದಾಯ ಮಾಡಬೇಕಾಗಿರುವ ಐವತ್ತು ಪೈಸೆ ಹಾಗೂ ಅದಕ್ಕಿಂತ ಹೆಚ್ಚಿನ ಭಿನ್ನಾಂಕಗಳನ್ನು ಮುಂದಿನ ರೂಪಾಯಿಗೆ ಪೂರ್ಣಗೊಳಿಸತಕ್ಕದ್ದು ಮತ್ತು ಐವತ್ತು ಪೈಸೆಗಿಂತ ಕಡಿಮೆ ಇರುವ ಭಿನ್ನಾಂಕಗಳನ್ನು ಕಡೆಗಣಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಪದ್ಮಾವತಿ)
ವಿಶೇಷಾಧಿಕಾರಿ ಹಾಗೂ ಪದನಿಮಿತ್ತ
ಸರ್ಕಾರದ ಉಪ ಕಾರ್ಯದರ್ಶಿ,
ಆರ್ಥಿಕ ಇಲಾಖೆ (ವಿಶ್ರಾಂತಿ ವೇತನ)

ಇವರಿಗೆ:

1) ಪ್ರಧಾನ ಮಹಾಲೇಖಪಾಲರು (ಸಿವಿಲ್ ಮತ್ತು ವಾಣಿಜ್ಯ ಲೆಕ್ಕ ಪರಿಶೋಧನೆ) ಕರ್ನಾಟಕ, ಬೆಂಗಳೂರು.
2) ಮಹಾಲೇಖಪಾಲರು (ಕಂದಾಯ ಸ್ವೀಕೃತಿ ಮತ್ತು ಕಾಮಗಾರಿಗಳು ಮತ್ತು ಅರಣ್ಯ ಲೆಕ್ಕ ಪರಿಶೋಧನೆ), ಕರ್ನಾಟಕ, ಬೆಂಗಳೂರು.
3) ಮಹಾಲೇಖಪಾಲರು (ಲೆಕ್ಕಗಳು ಮತ್ತು ಹಕ್ಕುಗಳು), ಕರ್ನಾಟಕ, ಬೆಂಗಳೂರು.
4) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು/ಕಾರ್ಯದರ್ಶಿಗಳು.
5) ಸರ್ಕಾರದ ಅಪರ/ಜಂಟಿ/ಉಪ/ಅಧೀನ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ/ಕೃಷಿ ಮತ್ತು ತೋಟಗಾರಿಕೆ ಇಲಾಖೆ.
6) ನಿರ್ದೇಶಕರು, ಖಜಾನೆ ಇಲಾಖೆ, ಬೆಂಗಳೂರು.
7) ಎಲ್ಲಾ ಜಿಲ್ಲಾ ಖಜಾನೆ ಅಧಿಕಾರಿಗಳು.
8) ಎಲ್ಲಾ ಶಾಖೆಗಳು, ಶಿಕ್ಷಣ ಇಲಾಖೆ/ಕೃಷಿ ಮತ್ತು ತೋಟಗಾರಿಕೆ ಇಲಾಖೆ.
9) ಶಾಖೆಯ ರಕ್ಷಾ ಕಡತ.
10) ವಾರಪತ್ರ.

# ಕರ್ನಾಟಕ ಸರ್ಕಾರದ ನಡವಳಿ

**ವಿಷಯ**:- ಪರಿಷ್ಕೃತ 2006ರ ಎಐಸಿಟಿಇ ವೇತನ ಶ್ರೇಣಿಗಳಲ್ಲಿ ವೇತನ ಪಡೆದು ನಿವೃತ್ತರಾದ ಸರ್ಕಾರಿ, ಅನುದಾನಿತ ಮತ್ತು ವಿಶ್ವವಿದ್ಯಾಲಯ ಇಂಜಿನಿಯರಿಂಗ್ ಕಾಲೇಜುಗಳಲ್ಲಿನ ಬೋಧಕ ವರ್ಗದವರಿಗೆ ತುಟ್ಟಿಭತ್ಯೆಯನ್ನು ಮಂಜೂರು ಮಾಡುವ ಬಗ್ಗೆ.

**ಓದಲಾಗಿದೆ**:- (1) ಸರ್ಕಾರಿ ಆದೇಶ ಸಂಖ್ಯೆ: ಆಇ (ವಿ) 21 ಸಿಪಿಪಿ 2010 ದಿನಾಂಕ: 09.12.2010.

(2) ಸರ್ಕಾರಿ ಆದೇಶ ಸಂಖ್ಯೆ: ಇಡಿ 96 ಡಿಟಿಇ 2010 ದಿನಾಂಕ: 07.03.2010.

(3) ಸರ್ಕಾರಿ ಆದೇಶ ಸಂಖ್ಯೆ: ಆಇ (ವಿ) 22 ಪಿಇಎನ್ 2011 ದಿನಾಂಕ: 19.04.2011.

---

ಪ್ರಸ್ತಾವನೆ:-

ಮೇಲೆ (1) ರಲ್ಲಿ ಓದಲಾದ ದಿನಾಂಕ: 9.12.2010ರ ಸರ್ಕಾರಿ ಆದೇಶದಲ್ಲಿ ದಿನಾಂಕ: 1.7.2010ರಿಂದ ಜಾರಿಗೆ ಬರುವಂತೆ 1996ರ ಎಐಸಿಟಿಇ ವೇತನ ಶ್ರೇಣಿಗಳಲ್ಲಿ ವೇತನ ಪಡೆಯುತ್ತಿದ್ದು ದಿನಾಂಕ 1.7.2005 ರಂದು ಅಥವಾ ತದನಂತರ ನಿವೃತ್ತರಾದ ಬೋಧಕ ವರ್ಗದ ಪಿಂಚಣಿದಾರರಿಗೆ ಲಭ್ಯವಿರುವ ತುಟ್ಟಿ ಭತ್ಯೆ ದರವನ್ನು ಮೂಲ ನಿವೃತ್ತಿ ವೇತನ/ಕುಟುಂಬ ನಿವೃತ್ತಿ ವೇತನದ ಶೇಕಡ 137 ರಿಂದ 153ಕ್ಕೆ ಹೆಚ್ಚಿಸಿ ಮಂಜೂರು ಮಾಡಲಾಗಿತ್ತು.

ಮೇಲೆ (2) ರಲ್ಲಿ ಓದಲಾದ ದಿನಾಂಕ: 24.03.2010ರ ಸರ್ಕಾರಿ ಆದೇಶದಲ್ಲಿ ಎಐಸಿಟಿಇ ವೇತನ ಶ್ರೇಣಿಗಳಲ್ಲಿ ವೇತನ ಪಡೆಯುತ್ತಿರುವ ಸರ್ಕಾರಿ, ಅನುದಾನಿತ ಮತ್ತು ವಿಶ್ವವಿದ್ಯಾಲಯ ಇಂಜಿನಿಯರಿಂಗ್ ಕಾಲೇಜುಗಳಲ್ಲಿನ ಬೋಧಕ ವರ್ಗದವರಿಗೆ 2006 ಪರಿಷ್ಕೃತ ಎಐಸಿಟಿಇ ವೇತನ ಶ್ರೇಣಿಗಳನ್ನು ದಿನಾಂಕ: 01.01.2006 ರಿಂದ ಜಾರಿಗೆ ಬರುವಂತೆ ವಿಸ್ತರಿಸಲಾಗಿದೆ. ಈ ಹಿನ್ನೆಲೆಯಲ್ಲಿ ದಿನಾಂಕ: 01.01.2006 ರಂದು ಮತ್ತು ತದನಂತರ 2006ರ ಪರಿಷ್ಕೃತ ಎಐಸಿಟಿಇ ವೇತನ ಶ್ರೇಣಿಗಳಲ್ಲಿ ವೇತನ ಪಡೆದು ನಿವೃತ್ತರಾದ ಅಥವಾ ಸೇವೆಯಲ್ಲಿರುವಾಗ ಮೃತಪಟ್ಟ ಬೋಧಕ ಮತ್ತು ತತ್ಸಮಾನ ವರ್ಗದ ಪಿಂಚಣಿದಾರರ/ಕುಟುಂಬ ನಿವೃತ್ತಿ ವೇತನದಾರರ ತುಟ್ಟಿಭತ್ಯೆಯ ದರವನ್ನು ದಿನಾಂಕ: 01.01.2006 ರಿಂದ ಕಾಲಕಾಲಕ್ಕೆ ಕ್ರಮಬದ್ಧಗೊಳಿಸುವುದನ್ನು ಸರ್ಕಾರವು ಪರಿಶೀಲಿಸಿ ಕೆಳಕಂಡಂತೆ ಆದೇಶಿಸಿದೆ.

## ಸರ್ಕಾರಿ ಆದೇಶ ಸಂಖ್ಯೆ: ಆಇ (ವಿಶೇಷ) 126 ಪಿಇಎನ್ 2011
## ಬೆಂಗಳೂರು, ದಿನಾಂಕ: 19ನೇ ಮೇ 2011.

2006ರ ಎಐಸಿಟಿಇ ವೇತನ ಶ್ರೇಣಿಗಳಲ್ಲಿ ವೇತನ ಪಡೆದು ದಿನಾಂಕ: 01.01.2006 ರಂದು ಮತ್ತು ತದನಂತರ ನಿವೃತ್ತರಾದ ಅಥವಾ ಸೇವೆಯಲ್ಲಿರುವಾಗ ಮೃತಪಟ್ಟ ಸರ್ಕಾರಿ, ಅನುದಾನಿತ ಮತ್ತು ವಿಶ್ವವಿದ್ಯಾಲಯ ಇಂಜಿನಿಯರಿಂಗ್ ಕಾಲೇಜುಗಳಲ್ಲಿನ ಬೋಧಕ ಮತ್ತು

ತತ್ಸಮಾನ ವರ್ಗದವರ/ಕುಟುಂಬ ನಿವೃತ್ತಿ ವೇತನದಾರರ ತುಟ್ಟಿಭತ್ಯೆ ದರಗಳನ್ನು ಕೆಳಗಿನಂತೆ ಕ್ರಮಬದ್ಧಗೊಳಿಸಲು ಸರ್ಕಾರವು ಹರ್ಷಿಸುತ್ತದೆ.

| ದಿನಾಂಕ | ತುಟ್ಟಿಭತ್ಯೆ ದರ |
|---|---|
| 01.01.2006 | ತುಟ್ಟಿಭತ್ಯೆ ಇಲ್ಲ |
| 01.07.2006 | ಮೂಲ ನಿವೃತ್ತಿ ವೇತನ/ಕುಟುಂಬ ನಿವೃತ್ತಿ ವೇತನದ ಶೇ.02 ರಷ್ಟು |
| 01.01.2007 | ಮೂಲ ನಿವೃತ್ತಿ ವೇತನ/ಕುಟುಂಬ ನಿವೃತ್ತಿ ವೇತನದ ಶೇ.06 ರಷ್ಟು |
| 01.07.2007 | ಮೂಲ ನಿವೃತ್ತಿ ವೇತನ/ಕುಟುಂಬ ನಿವೃತ್ತಿ ವೇತನದ ಶೇ.09 ರಷ್ಟು |
| 01.01.2008 | ಮೂಲ ನಿವೃತ್ತಿ ವೇತನ/ಕುಟುಂಬ ನಿವೃತ್ತಿ ವೇತನದ ಶೇ.12 ರಷ್ಟು |
| 01.07.2008 | ಮೂಲ ನಿವೃತ್ತಿ ವೇತನ/ಕುಟುಂಬ ನಿವೃತ್ತಿ ವೇತನದ ಶೇ.16 ರಷ್ಟು |
| 01.01.2009 | ಮೂಲ ನಿವೃತ್ತಿ ವೇತನ/ಕುಟುಂಬ ನಿವೃತ್ತಿ ವೇತನದ ಶೇ.22 ರಷ್ಟು |
| 01.07.2009 | ಮೂಲ ನಿವೃತ್ತಿ ವೇತನ/ಕುಟುಂಬ ನಿವೃತ್ತಿ ವೇತನದ ಶೇ.27 ರಷ್ಟು |
| 01.01.2010 | ಮೂಲ ನಿವೃತ್ತಿ ವೇತನ/ಕುಟುಂಬ ನಿವೃತ್ತಿ ವೇತನದ ಶೇ.35 ರಷ್ಟು |
| 01.07.2010 | ಮೂಲ ನಿವೃತ್ತಿ ವೇತನ/ಕುಟುಂಬ ನಿವೃತ್ತಿ ವೇತನದ ಶೇ.45 ರಷ್ಟು |

ಮುಂದುವರೆದು, ಸರ್ಕಾರವು ದಿನಾಂಕ:1ನೇ ಜನವರಿ 2011ರಿಂದ ಜಾರಿಗೆ ಬರುವಂತೆ ಪರಿಷ್ಕೃತ 2006ರ ಎಐಸಿಟಿಇ ವೇತನ ಶ್ರೇಣಿಗಳಲ್ಲಿ ವೇತನ ಪಡೆದು ದಿನಾಂಕ: 1.1.2006 ರಂದು ಅಥವಾ ತದನಂತರ ನಿವೃತ್ತರಾದ ಬೋಧಕ ಮತ್ತು ತತ್ಸಮಾನ ವರ್ಗದ ಪಿಂಚಣಿದಾರರ/ ಕುಟುಂಬ ನಿವೃತ್ತಿ ವೇತನದಾರರ ತುಟ್ಟಿಭತ್ಯೆಯ ದರವನ್ನು ಮೂಲ ವೇತನದ ಶೇಕಡ 45 ರಿಂದ 51ಕ್ಕೆ ಹೆಚ್ಚಿಸಿ ಮಂಜೂರು ಮಾಡಿದೆ.

ದಿನಾಂಕ: 01.01.2011 ರಿಂದ ಮಂಜೂರಾಗಿರುವ ತುಟ್ಟಿಭತ್ಯೆಯ ಮೊತ್ತವನ್ನು ಮುಂದಿನ ಆದೇಶದವರೆಗೆ ನಗದಾಗಿ ಪಾವತಿಸತಕ್ಕದ್ದು.

ತುಟ್ಟಿಭತ್ಯೆ ಕಾರಣದಿಂದ ಸಂದಾಯ ಮಾಡಬೇಕಾಗಿರುವ ಐವತ್ತು ಪೈಸೆ ಹಾಗೂ ಅದಕ್ಕಿಂತ ಹೆಚ್ಚಿನ ಭಿನ್ನಾಂಕಗಳನ್ನು ಮುಂದಿನ ರೂಪಾಯಿಗೆ ಪೂರ್ಣಗೊಳಿಸತಕ್ಕದ್ದು ಮತ್ತು ಐವತ್ತು ಪೈಸೆಗಿಂತ ಕಡಿಮೆ ಇರುವ ಭಿನ್ನಾಂಕಗಳನ್ನು ಕಡೆಗಣಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶದ ಮೇರೆಗೆ
ಮತ್ತು ಅವರ ಹೆಸರಿನಲ್ಲಿ,

(ಪದ್ಮಾವತಿ)
ವಿಶೇಷಾಧಿಕಾರಿ ಹಾಗೂ ಪದನಿಮಿತ್ತ
ಸರ್ಕಾರದ ಉಪ ಕಾರ್ಯದರ್ಶಿ,
ಆರ್ಥಿಕ ಇಲಾಖೆ (ವಿಶ್ರಾಂತಿ ವೇತನ)

ಇವರಿಗೆ:

1. ಪ್ರಧಾನ ಮಹಾಲೇಖಪಾಲರು (ಸಿವಿಲ್ ಮತ್ತು ವಾಣಿಜ್ಯ ಲೆಕ್ಕ ಪರಿಶೋಧನೆ) ಕರ್ನಾಟಕ, ಬೆಂಗಳೂರು.

2. ಮಹಾಲೇಖಪಾಲರು (ಕಂದಾಯ ಮತ್ತು ಕಾಮಗಾರಿಗಳು ಮತ್ತು ಅರಣ್ಯ ಲೆಕ್ಕ ಪರಿಶೋಧನೆ), ಕರ್ನಾಟಕ, ಬೆಂಗಳೂರು.
3. ಮಹಾಲೇಖಪಾಲರು (ಲೆಕ್ಕಗಳು ಮತ್ತು ಹಕ್ಕುಗಳು), ಕರ್ನಾಟಕ, ಬೆಂಗಳೂರು.
4. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು/ಕಾರ್ಯದರ್ಶಿಗಳು.
5. ಸರ್ಕಾರದ ಅಪರ/ಜಂಟಿ/ಉಪ/ಅಧೀನ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ/ಕೃಷಿ ಮತ್ತು ತೋಟಗಾರಿಕೆ ಇಲಾಖೆ/ಕಾನೂನು ಇಲಾಖೆ.
6. ಸರ್ಕಾರದ ಕಾರ್ಯದರ್ಶಿ ಆರ್ಥಿಕ ಇಲಾಖೆ (ವೆಚ್ಚ)/(ಆಯವ್ಯಯ ಮತ್ತು ಸಂಪನ್ಮೂಲ).
7. ಸರ್ಕಾರದ ಉಪ ಕಾರ್ಯದರ್ಶಿ/ಆಧೀನ ಕಾರ್ಯದರ್ಶಿ, ಶಿಕ್ಷಣ ಇಲಾಖೆ.
8. ನಿರ್ದೇಶಕರು, ರಾಜ್ಯ ಖಜಾನೆ ಇಲಾಖೆ, ಬೆಂಗಳೂರು
9. ಎಲ್ಲಾ ಜಿಲ್ಲಾ ಖಜಾನಾಧಿಕಾರಿಗಳು.
10. ಶಾಖೆಯ ರಕ್ಷಕ ಕಡತ/ ವಾರದ ರಾಜ್ಯಪತ್ರ.

# <u>ಕರ್ನಾಟಕ ಸರ್ಕಾರದ ನಡವಳಿ</u>

ವಿಷಯ:- ಪೂರ್ವ ಪರಿಷ್ಕೃತ ಎಐಸಿಟಿಇ ವೇತನ ಶ್ರೇಣಿಗಳಲ್ಲಿ ವೇತನ ಪಡೆದು ನಿವೃತ್ತರಾದ ಬೋಧಕ ಸಿಬ್ಬಂದಿಗಳಿಗೆ ತುಟ್ಟಿಭತ್ಯೆಯನ್ನು ಮಂಜೂರು ಮಾಡುವ ಬಗ್ಗೆ.

**ಓದಲಾಗಿದೆ**:-(1) ಸರ್ಕಾರಿ ಆದೇಶ ಸಂಖ್ಯೆ: ಅಇ (ವಿ) 21 ಸಿಪಿಪಿ 2010 ದಿನಾಂಕ: 9.12.2010.

(2) ಸರ್ಕಾರಿ ಆದೇಶ ಸಂಖ್ಯೆ: ಅಇ (ವಿ) 126 ಪಿಇಎನ್ 2011 ದಿನಾಂಕ:19.05.2011

(3) ಸರ್ಕಾರಿ ಆದೇಶ ಸಂಖ್ಯೆ: ಅಇ 28 ಎಸ್‌ಅರ್‌ಪಿ 2010 ದಿನಾಂಕ: 29.04.2011.

(4) ಸರ್ಕಾರಿ ಆದೇಶ ಸಂಖ್ಯೆ: ಅಇ 22 ಎಸ್‌ಅರ್‌ಪಿ 2010 ದಿನಾಂಕ: 19.04.2011.

<u>ಪ್ರಸ್ತಾವನೆ:-</u>

ಮೇಲೆ (1) ರಲ್ಲಿ ಓದಲಾದ ದಿನಾಂಕ: 9.12.2010ರ ಸರ್ಕಾರಿ ಆದೇಶದಲ್ಲಿ ದಿನಾಂಕ: 1.7.2010ರಿಂದ ಜಾರಿಗೆ ಬರುವಂತೆ 1996ರ ಎಐಸಿಟಿಇ ವೇತನ ಶ್ರೇಣಿಗಳಲ್ಲಿ ವೇತನ ಪಡೆಯುತ್ತಿದ್ದು ದಿನಾಂಕ 1.7.2005 ಅಥವಾ ತದ ನಂತರ ನಿವೃತ್ತರಾದ ಬೋಧಕ ವರ್ಗದ ಸಿಬ್ಬಂದಿಗಳಿಗೆ ಹಾಲಿ ಲಭ್ಯವಿರುವ ತುಟ್ಟಿಭತ್ಯೆ ದರವನ್ನು ಮೂಲ ನಿವೃತ್ತಿ ವೇತನ/ಕುಟುಂಬ ನಿವೃತ್ತಿ ವೇತನದ ಶೇಕಡ 137 ರಿಂದ 153ಕ್ಕೆ ಹೆಚ್ಚಿಸಿ ಮಂಜೂರು ಮಾಡಲಾಗಿತ್ತು.

ಮೇಲೆ (2) ರಲ್ಲಿ ಓದಲಾದ ದಿನಾಂಕ:19.05.2011ರ ಸರ್ಕಾರಿ ಆದೇಶದಲ್ಲಿ ಪರಿಷ್ಕೃತ 2006ರ ಎಐಸಿಟಿಇ ವೇತನ ಶ್ರೇಣಿಗಳಲ್ಲಿ ವೇತನ ಪಡೆದು ದಿನಾಂಕ:1.1.2006 ರಂದು ತದ ನಂತರ ನಿವೃತ್ತರಾದ ಬೋಧಕ ಮತ್ತು ತತ್ಸಮಾನ ವರ್ಗದ ಪಿಂಚಣಿದಾರರ/ಕುಟುಂಬ ಪಿಂಚಣಿದಾರರಿಗೆ ದಿನಾಂಕ: 1.1.2006 ರಿಂದ ತುಟ್ಟಿಭತ್ಯೆಯ ದರವನ್ನು ಕ್ರಮಬದ್ಧಗೊಳಿಸಿ ದಿನಾಂಕ: 1.1.2011 ರಿಂದ ಜಾರಿಗೆ ಬರುವಂತೆ ಮೂಲ ನಿವೃತ್ತಿ ವೇತನದ ಶೇಕಡ 45 ರಿಂದ ಶೇಕಡ 51ಕ್ಕೆ ಹೆಚ್ಚಿಸಿ ಮಂಜೂರು ಮಾಡಿದೆ.

ಮೇಲೆ (3) ರಲ್ಲಿ ಓದಲಾದ ದಿನಾಂಕ:29.04.2011ರ ಸರ್ಕಾರಿ ಆದೇಶದಲ್ಲಿ ದಿನಾಂಕ: 1.1.2011 ರಿಂದ ಜಾರಿಗೆ ಬರುವಂತೆ ಪೂರ್ವ ಪರಿಷ್ಕೃತ ಎಐಸಿಟಿಇ ವೇತನ ಶ್ರೇಣಿಗಳಲ್ಲಿರುವ ಬೋಧಕ ಸಿಬ್ಬಂದಿಗಳಿಗೆ ಹಾಲಿ ಲಭ್ಯವಿರುವ ತುಟ್ಟಿಭತ್ಯೆಯ ದರವನ್ನು ಮೂಲ ವೇತನದ ಶೇಕಡ 153 ರಿಂದ ಶೇಕಡ 166ಕ್ಕೆ ಹೆಚ್ಚಿಸಿ ಮಂಜೂರು ಮಾಡಿದೆ.

ಮೇಲೆ (4) ರಲ್ಲಿ ಓದಲಾದ ದಿನಾಂಕ: 19.04.2011ರ ಸರ್ಕಾರಿ ಆದೇಶದಂತೆ 2006ರ ಪರಿಷ್ಕೃತ ಎಐಸಿಟಿಇ ವೇತನ ಶ್ರೇಣಿಗಳಲ್ಲಿರುವ ಬೋಧಕ ಸಿಬ್ಬಂದಿಗಳಿಗೆ ದಿನಾಂಕ:1.4.2011 ರಿಂದ ಶೇಕಡ 51 ರಷ್ಟು ತುಟ್ಟಿಭತ್ಯೆ ದರಗಳು ಲಭ್ಯವಾಗುತ್ತದೆ. ಈ ಹಿನ್ನಲೆಯಲ್ಲಿ ಪೂರ್ವ ಪರಿಷ್ಕೃತ ಎಐಸಿಟಿಇ ವೇತನ ಶ್ರೇಣಿಗಳಲ್ಲಿ ವೇತನ ಪಡೆದು ನಿವೃತ್ತರಾದ ಅಥವಾ ಸೇವೆಯಲ್ಲಿರುವಾಗ ಮೃತಪಟ್ಟ ಬೋಧಕ ವರ್ಗದ ಪಿಂಚಣಿದಾರರ/ಕುಟುಂಬ

ಪಿಂಚಣಿದಾರರ ತುಟ್ಟಿಭತ್ಯೆಯ ದರವನ್ನು ದಿನಾಂಕ: 1.1.2011 ರಿಂದ ಈ ಕೆಳಕಂಡಂತೆ ಪರಿಷ್ಕರಿಸಲಾಗಿದೆ.

**<u>ಸರ್ಕಾರಿ ಆದೇಶ ಸಂಖ್ಯೆ: ಆಇ (ವಿಶೇಷ) 126 ಪಿಇಎನ್ 2011</u>**
**<u>ಬೆಂಗಳೂರು, ದಿನಾಂಕ: 19ನೇ ಮೇ 2011</u>**

ಸರ್ಕಾರವು ದಿನಾಂಕ: 1ನೇ ಜನವರಿ 2011 ರಿಂದ ಜಾರಿಗೆ ಬರುವಂತೆ ಪೂರ್ವ ಪರಿಷ್ಕೃತ ಎಐಸಿಟಿಇ ವೇತನ ಶ್ರೇಣಿಗಳಲ್ಲಿ ನಿವೃತ್ತರಾದ ಅಥವಾ ಸೇವೆಯಲ್ಲಿರುವಾಗ ಮೃತಪಟ್ಟ ಬೋಧಕ ವರ್ಗದ ಪಿಂಚಣಿದಾರರ/ಕುಟುಂಬ ಪಿಂಚಣಿದಾರರಿಗೆ ಹಾಲಿ ಲಭ್ಯವಿರುವ ತುಟ್ಟಿಭತ್ಯೆ ದರವನ್ನು ಮೂಲ ನಿವೃತ್ತಿ ವೇತನ/ಕುಟುಂಬ ನಿವೃತ್ತಿ ವೇತನದ ಶೇಕಡ 153 ರಿಂದ ಶೇಕಡ 166ಕ್ಕೆ ಹೆಚ್ಚಿಸಿ ಮಂಜೂರು ಮಾಡಿದೆ.

ಮೇಲೆ (2) ರಲ್ಲಿ ಓದಲಾದ ದಿನಾಂಕ:19.05.2011ರ ಸರ್ಕಾರಿ ಆದೇಶದಂತೆ 2006 ಪರಿಷ್ಕೃತ ಎಐಸಿಟಿಇ ವೇತನ ಶ್ರೇಣಿಗಳಲ್ಲಿ ನಿವೃತ್ತರಾದ ಬೋಧಕ ವರ್ಗದ ಪಿಂಚಣಿದಾರರ/ಕುಟುಂಬ ಪಿಂಚಣಿದಾರರಿಗೆ ದಿನಾಂಕ: 1.4.2011 ರಿಂದ ಶೇಕಡ 51 ರಷ್ಟು ತುಟ್ಟಿಭತ್ಯೆ ದರಗಳು ಲಭ್ಯವಾಗುತ್ತದೆ.

ಈ ಆದೇಶದ ಮೇರೆಗೆ ಮಂಜೂರಾಗಿರುವ ತುಟ್ಟಿಭತ್ಯೆಯ ಮೊತ್ತವನ್ನು ಮುಂದಿನ ಆದೇಶದವರೆಗೆ ನಗದಾಗಿ ಪಾವತಿಸತಕ್ಕದ್ದು.

ತುಟ್ಟಿಭತ್ಯೆ ಕಾರಣದಿಂದ ಸಂದಾಯ ಮಾಡಬೇಕಾಗಿರುವ ಐವತ್ತು ಪೈಸೆ ಹಾಗೂ ಅದಕ್ಕಿಂತ ಹೆಚ್ಚಿನ ಭಿನ್ನಾಂಕಗಳನ್ನು ಮುಂದಿನ ರೂಪಾಯಿಗೆ ಪೂರ್ಣಗೊಳಿಸತಕ್ಕದ್ದು ಮತ್ತು ಐವತ್ತು ಪೈಸೆಗಿಂತ ಕಡಿಮೆ ಇರುವ ಭಿನ್ನಾಂಕಗಳನ್ನು ಕಡೆಗಣಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶದ ಮೇರೆಗೆ
ಮತ್ತು ಅವರ ಹೆಸರಿನಲ್ಲಿ,

(ಪದ್ಮಾವತಿ)
ವಿಶೇಷಾಧಿಕಾರಿ ಹಾಗೂ ಪದನಿಮಿತ್ತ
ಸರ್ಕಾರದ ಉಪ ಕಾರ್ಯದರ್ಶಿ,
ಆರ್ಥಿಕ ಇಲಾಖೆ (ವಿಶ್ರಾಂತಿ ವೇತನ)

ಇವರಿಗೆ:

1. ಪ್ರಧಾನ ಮಹಾಲೇಖಪಾಲರು (ಸಿವಿಲ್ ಮತ್ತು ವಾಣಿಜ್ಯ ಲೆಕ್ಕ ಪರಿಶೋಧನೆ) ಕರ್ನಾಟಕ, ಬೆಂಗಳೂರು.
2. ಮಹಾಲೇಖಪಾಲರು (ಕಂದಾಯ ಮತ್ತು ಕಾಮಗಾರಿಗಳು ಮತ್ತು ಅರಣ್ಯ ಲೆಕ್ಕ ಪರಿಶೋಧನೆ), ಕರ್ನಾಟಕ, ಬೆಂಗಳೂರು.
3. ಮಹಾಲೇಖಪಾಲರು (ಲೆಕ್ಕಗಳು ಮತ್ತು ಹಕ್ಕುಗಳು), ಕರ್ನಾಟಕ, ಬೆಂಗಳೂರು.
4. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು/ಕಾರ್ಯದರ್ಶಿಗಳು.
5. ಸರ್ಕಾರದ ಅಪರ/ಜಂಟಿ/ಉಪ/ಅಧೀನ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ/ಕೃಷಿ ಮತ್ತು ತೋಟಗಾರಿಕೆ ಇಲಾಖೆ/ಕಾನೂನು ಇಲಾಖೆ.

6. ಸರ್ಕಾರದ ಕಾರ್ಯದರ್ಶಿ ಆರ್ಥಿಕ ಇಲಾಖೆ (ವೆಚ್ಚ)/(ಆಯವ್ಯಯ ಮತ್ತು ಸಂಪನ್ಮೂಲ).
7. ಸರ್ಕಾರದ ಉಪ ಕಾರ್ಯದರ್ಶಿ/ಆಧೀನ ಕಾರ್ಯದರ್ಶಿ, ಶಿಕ್ಷಣ ಇಲಾಖೆ.
8. ನಿರ್ದೇಶಕರು, ರಾಜ್ಯ ಖಜಾನೆ ಇಲಾಖೆ, ಬೆಂಗಳೂರು
9. ಎಲ್ಲಾ ಜಿಲ್ಲಾ ಖಜಾನಾಧಿಕಾರಿಗಳು.
10.ಶಾಖೆಯ ರಕ್ಷಕ ಕಡತ/ ವಾರದ ರಾಜ್ಯಪತ್ರ.